## 49

# ಲೋಕವನ್ನು ಅಲ್ಲೋಲ ಕಲ್ಲೋಲ ಮಾಡುವದು

# (17:6)

ಯಹೂದ್ಯರು ಕ್ರೈಸ್ತರನ್ನು ಥೆಸಲೋನಿಕದ ಅಧಿಕಾರಿಗಳ ಮುಂದೆ ಎಳೆದು ತಂದು, ಈ ದೋಷಾರೋಪ ಮಾಡಿದರು: "ಲೋಕವನ್ನು ಅಲ್ಲಕಲ್ಲೋಲ ಮಾಡಿದ ಆ ಮನುಷ್ಯರು ಇಲ್ಲಿಗೂ ಬಂದಿದ್ದಾರೆ" (ಅಪೊಸ್ತಲರ ಕೃತ್ಯಗಳು 17:6; KJV).[1] ನಾವು "ಲೋಕವನ್ನು ಅಲ್ಲೋಲ ಕಲ್ಲೋಲ ಮಾಡಿದ್ದೆವೋ"? ಎಂಬ ಸೂಚನೆಯನ್ನು ಈ ಪದಗಳು ನೀಡುತ್ತವೆ? ಅದನ್ನು ಸ್ವಲ್ಪವಾದರೂ ಅಲ್ಲಾಡಿಸಿರುವೆವೋ ಮೊದಲ ಶತಮಾನದ ಸಭೆಯನ್ನು ಈ ದಿನದ ಸಭೆಗೆ ಹೋಲಿಕೆ ಮಾಡುವಂತದ್ದು ಕಿವಿಗಿಡ ಚಿಕ್ಕುವ ಶಕ್ತಿಶಾಲಿಯಾದ ತುಪಾಕಿಯ ಶಬ್ದವನ್ನು ಆ ಟೀಕೆಯ ತುಪಾಕಿಯಿಂದ ಹೊರಡುವ ಶಬ್ದಕ್ಕೆ ಹೋಲಿಸಿದಂತಾಗುತ್ತದೆ.[2]

"ಆದಿ ಸಭೆಯು ಮಾಡಿದ ಕಾರ್ಯಗಳ ರಹಸ್ಯವನ್ನು ತಿಳಿಯುವದಾದರೆ, ನಾವು ಸಹ ಅದನ್ನು ಮಾಡಬಹುದು" ಎಂದು ನಾವುಗಳು ಹೇಳಬಹುದು. ಆದಿ ಸಭೆಯ "ಶಕ್ತಿಯ ರಹಸ್ಯವನ್ನು" ತಿಳಿಯುವದು ಕಷ್ಟ ಕರವಾಗಿರುವದಿಲ್ಲ. ಅವರಲ್ಲಿದ್ದಂತ ಭಾವನೆಗಳೇ ಅವರಿಗೆ ಯಶಸ್ಸನ್ನು ತಂದವು ಎಂದು ಅಪೊಸ್ತಲರ ಕೃತ್ಯವನ್ನು ಓದುವಾಗ ತಿಳಿಯುತ್ತೇವೆ.

### ಕ್ರೈಸ್ತತ್ವದ ಕಡೆಗಿದ್ದ ಮನೋಭಾವ

ಆದಿ ಕ್ರೈಸ್ತರಿಗೆ ಕ್ರೈಸ್ತತ್ವವು ಉದ್ವೇಗದ ಸ್ವಾತಂತ್ರ್ಯವಾಗಿರದೇ ಅಥವಾ ಅವರ ಸುತ್ತಲೂ ಇದ್ದಂತ ಮುಖ್ಯ ವಿಷಯವು ಆಗಿರದೇ, ಅದು ಅವರ ಹೃದಯದ ಅಭಿಲಾಷೆ ಆಗಿತ್ತು. ಅದು ಕೆಲವು ಪರಿಸ್ಥಿತಿಗಳನ್ನು ನೋಡುವಂತ ಮಾರ್ಗವಾಗಿರದೇ, ಎಲ್ಲಾ ಸಂದರ್ಭಗಳನ್ನು ಪರಿಗ್ರಹಿಸುವ ಮಾರ್ಗವಾಗಿತ್ತು (ಗಲಾತ್ಯ 2:20). ಇದರ ಪರಿಣಾಮ ವಾಗಿ, ಆದಿ ಕ್ರೈಸ್ತರು ಅವರಲ್ಲಿರುವದೆಲ್ಲವನ್ನು ಕೊಟ್ಟುಬಿಟ್ಟರು: ಅವರು ತಮ್ಮ ಸ್ವಾಸ್ಥ್ಯವನ್ನು ಮಾರಿ ಇತರರಿಗೆ ಕೊಟ್ಟುಬಿಟ್ಟರು (ಅಪೊಸ್ತಲರ ಕೃತ್ಯಗಳು 5). ಅವರು ತಮ್ಮ ಮನೆಗಳನ್ನು ತಮ್ಮ ಕುಟುಂಬಗಳನ್ನು, ತಮ್ಮ ಕೆಲಸಗಳನ್ನು ತ್ಯಾಗಮಾಡಿದರು (ಅಪೊಸ್ತಲರ ಕೃತ್ಯಗಳು 8). ಕೆಲವರು ತಮ್ಮ ಜೀವವನ್ನೇ ಅರ್ಪಿಸಿದರು (ಅಪೊಸ್ತಲರ ಕೃತ್ಯಗಳು 7; 12). ಇದರ ಪರಿಣಾಮವಾಗಿ, ಸಭೆಯು ಎತ್ತರವಾಗಿಯೂ ಮತ್ತು ವಿಸ್ತಾರವಾಗಿಯೂ ವೃದ್ಧಿಯಾಯಿತು.

"ನಿಶ್ಚಯವಾಗಿಯೂ ದೇವರು ನಮ್ಮಿಂದ ಇಷ್ಟೊಂದನ್ನು ಬಯಸುವದಿಲ್ಲ!" ಎಂದು ನಾವು ಯೋಚಿಸಬಹುದು. ಅದನ್ನು ನೀನು ಹೇಗೆ ತಿಳಿಯುವಿ? ಕ್ರೈಸ್ತತ್ವವು ನಿನಗೆ ಯಾವ ಅರ್ಥವನ್ನು ನೀಡುತ್ತದೆ? ಪ್ರಪಂಚದಾದ್ಯಂತ ಅದರ ಪ್ರಸರಾಣೆಯಾಗುವದಕ್ಕೆ ಯಾವುದಾದರೂ ತ್ಯಾಗವನ್ನು ಮಾಡಲು ನೀನು ಸಿದ್ಧನಿರುವೆಯಾ?

### ಜೀವಿತದ ಕಡೆಗಿರುವ ಮನೋಭಾವ

ಆದಿ ಕ್ರೈಸ್ತರು ಕ್ರೈಸ್ತತ್ವದ ಕಡೆಗೆ ಹೊಂದಿದ್ದ ಮನೋಭಾವದ ಪರಿಣಾಮವು ಜೀವಿತದ ಮನೋಭಾವದ ಪರಿಣಾಮವನ್ನುಂಟು ಮಾಡಿತು. ಅವರು ಯೇಸುವಿನಲ್ಲಿ ಹೊಸ ಜೀವಿತವನ್ನು ಹೊಂದಿದ್ದರು (ರೋಮಾಪುರ 6:3-6), ಅದನ್ನು ಅವರು ಗಂಭೀರವಾಗಿ ಪರಿಗಣಿಸಿದರು (ಅಪೊಸ್ತಲರ ಕೃತ್ಯಗಳು 19:19, 20). ಅವರು ಹೊಂದಾಣಿಕೆಯನ್ನು ಮಾಡಿಕೊಳ್ಳಲಿಲ್ಲ. ಒಬ್ಬ ಅಧಿಕಾರಿಯು ಹೇಳಿರುವಂತೆ ಆದಿ ಸಭೆಯ ಕಾಲದಲ್ಲಿ, ಒಂದು

ವೇಳೆ ಒಬ್ಬ ಮನುಷ್ಯನು ಸಭೆಯ ಕೂಟಕ್ಕೆ ಮೂರು ಸಾರಿ ನಿರಂತರವಾಗಿ ಬಾರದಿದ್ದರೆ ಅವನು ಸಹಜವಾಗಿ ಅನ್ಯೋನ್ಯತೆಯಿಂದ ದೂರ ಉಳಿಯಬೇಕಿತ್ತು.[3]

ಪ್ರಪಂಚದವರಿಗಿಂತಲೂ ವ್ಯತ್ಯಾಸವಾದ ಜೀವಿತವನ್ನು ಪ್ರಪಂಚವು ನಮ್ಮಲ್ಲಿ ಕಾಣದಿದ್ದರೇ ಪ್ರಪಂಚದ ಮೇಲೆ ಪರಿಣಾಮ ಬೀರಲು ಅಸಾಧ್ಯವಾಗುತ್ತದೆ! ಹಲವಾರು ವರ್ಷಗಳ ಹಿಂದೆ, ಒಬ್ಬ ಪ್ರಸಂಗಿಯು ಆರು ನೇಷನ್ಸ್ ಟ್ರೈಬ್ ಆಫ್ ಇಂಡಿಯನ್ಸ್ ಮುಖ್ಯಸ್ಥನಿಗೆ ಪತ್ರವನ್ನು ಬರೆದು ಅದರಲ್ಲಿ ಸೇವೆಯನ್ನು ಪ್ರಾರಂಭಿಸಬೇಕೆಂದಿದ್ದನು. ಅದರ ಪ್ರತ್ಯುತ್ತರವು ಪ್ರಸಂಗದ ಮಾದರಿಯಲ್ಲಿತ್ತು:

> ಸಹೋದರನೇ ನೀವುಗಳು ಬಿಳಿಯ ಜನರಿಗೆ ಸುವಾರ್ತೆಯನ್ನು ಸಾರುವರೆಂದು ನಾವು ತಿಳಿಯಲ್ಪಟ್ಟಿದ್ದೇವೆ. ಈ ಜನರು ನಮ್ಮ ನೆರೆಯವರಾಗಿದ್ದಾರೆ. ನಾವು ಅವರನ್ನು ಅರಿತಿದ್ದೇವೆ. ನಿಮ್ಮ ಪ್ರಸಂಗದ ಪರಿಣಾಮವು ಅವರಲ್ಲಿ ಯಾವ ರೀತಿ ಇರುತ್ತದೆಂದು ಕಾದು ನೋಡುತ್ತೇವೆ. ಅದು ಅವರಿಗೆ ಒಳ್ಳೆಯದನ್ನು ಮಾಡಿದ್ದರೆ, ಅವರು ಯಥಾರ್ಥರು ಮತ್ತು ಭಾರತೀಯರಿಗೆ ಮೋಸಮಾಡುವವರಾಗದಿದ್ದರೆ, ನೀವು ಹೇಳಿರುವ ಸಂಗತಿಗಳನ್ನು ನಾವು ಪರಿಗಣಿಸುತ್ತೇವೆ.

## ಇತರರ ಕಡೆಗಿರುವ ಮನೋಭಾವ

ನಾನು ಮತ್ತು ಜೋ ಮದುವೆಯಾದಾಗ, ನಾನು ಟೆಕ್ಸ್‌ಸ್‌ನ ಅಭಿಲೇನ್ ನಲ್ಲಿದ್ದೆ, ಆಕೆಯು ಮೂರ್ ಪಟ್ಟಣದಲ್ಲಿದ್ದಳು, ಅದು ಓಕ್ಲಾ ಹೋಮದಲ್ಲಿದೆ. ಆ ಎರಡು ಸ್ಥಳಗಳಿಗೆ ಅನೇಕ ಪತ್ರಗಳು ರವಾನೆಯಾಗಿದ್ದವು. ನಾನು ಆಕೆಗೆ ಬರೆದ ಒಂದು ವಿಶೇಷ ಪತ್ರವನ್ನು ನೆನಪು ಮಾಡುತ್ತೇನೆ: ನಾನು ಏನೇ ಬರೆದಿದ್ದರೂ, "ಆ ಸಾಲುಗಳ ಮಧ್ಯದಲ್ಲಿ" ನನ್ನ ಪ್ರೀತಿಯನ್ನು ಆಕೆಯು ಓದುತ್ತಿದ್ದಳು: ನಾನು ಅದಕ್ಕೆ ಈ ಪತ್ರದಲ್ಲಿ ನೀನು ನಿನ್ನ ಊಹೆಯನ್ನು ಬಳಸುವ ಅಗತ್ಯವಿಲ್ಲ ಎಂದು ಸೇರಿಸಿದ್ದೆ: ನಂತರ ನಾನು ಕೆಂಪಾದ ಲೇಖನಿಯಿಂದ, "ನಾನು ನಿನ್ನನ್ನು ಪ್ರೀತಿಸುತ್ತೇನೆ, ನಾನು ಪ್ರೀತಿಸುತ್ತೇನೆ, ನಾನು ಪ್ರೀತಿಸುತ್ತೇನೆ," ಎಂದು ಪ್ರತಿಯೊಂದು ಸಾಲಿನ ನಡುವೆ ಬರೆದಿದ್ದೆನು. ಅಪೊಸ್ತಲರ ಕೃತ್ಯದಲ್ಲಿ ಪ್ರೀತಿ ಎಂಬ ಪದವನ್ನು ಬಳಸದೆ ಇರಬಹುದು, ಆದರೆ ಸಾಲಿನ ನಡುವೆ ದೇವರಿಗೂ ಮತ್ತು ಮನುಷ್ಯರಿಗೂ ನಡುವೆ ಇರುವ ಪ್ರೀತಿ, ಹಾಗೂ ಆದಿ ಸಭೆಯವರು ದೇವರ ಕಡೆಗೆ ಇಟ್ಟಿದ ಪ್ರೀತಿಯನ್ನು ಇತರರೆಡೆಗೆ ಇಟ್ಟಿದ್ದ ಪ್ರೀತಿಯನ್ನು ಅಪೊಸ್ತಲರ ಕೃತ್ಯದಲ್ಲಿ ನೋಡುತ್ತೇವೆ.

ಅನ್ಯರಿಗೆ, ಇದು ಒಂದು ಆಶ್ಚರ್ಯಕರವಾದ ಸಂಗತಿಯಾಗಿತ್ತು. ಅನ್ಯರ ಪ್ರಪಂಚದಲ್ಲಿ "ನಾಯಿ - ನಾಯಿಯನ್ನೇ ತಿನ್ನುವ ಹಾಗೆ": ಮುಳುಗಿ ಹೋಗುತ್ತಿರುವವರನ್ನು ಒಡೆಯುವ ಹಾಗೆ; ಅಸ್ವಸ್ಥರನ್ನು ಅಲಕ್ಷಿಸಿದಂತೆ ಮತ್ತು ಅಸಹಾಯಕರನ್ನು ಅಲಕ್ಷಿಸಿದಂತೆ; ವೈರಿಗಳನ್ನು ಹಿಂದಟ್ಟುವಂತೆ, ಇದಕ್ಕೆ ತದ್ವಿರುದ್ಧವಾಗಿ ಕ್ರೈಸ್ತರು ಪ್ರೀತಿಸಿದರು, ರೋಮಾಯರು ಕ್ರೈಸ್ತರನ್ನು ಕತ್ತಿಯಿಂದ ಎದುರಿಸಿದರು - ಆದರೆ ಕ್ರೈಸ್ತರು ಅವರನ್ನು ಪ್ರೀತಿಯಿಂದ ಎದುರಿಸಿದರು - ಮತ್ತು ಅವರನ್ನು ಗೆದ್ದುಕೊಂಡರು. ಆದಿ ಸಭೆಯ ವೃದ್ಧಿಗೆ ಇದು ಪ್ರಥಮ ಕಾರಣವಾಗಿತ್ತು ಎಂದು ಇತಿಹಾಸಕಾರನಾದ ರೆಡ್‌ಗೆಫಾತ್ ತಿಳಿಸಿರುವರು.

ಈ ದಿನವು ಸಹ, ನಾವುಗಳು ಸ್ಪರ್ಧಾತ್ಮಕ ಲೋಕದಲ್ಲಿದ್ದೇವೆ, ಅನೇಕ ತತ್ವಗಳ ಮಧ್ಯದಲ್ಲಿದ್ದರೂ "ಪ್ರಥಮರಾಗಿರುವವರಿಗಾಗಿ ನೋಡಿರಿ" ನಿಜವಾದ ಕ್ರೈಸ್ತರು, ನಿಜವಾದ ಹಿತಚಿಂತಕರು.

## ಬೋಧನೆಯ ಕಡೆಗಿರುವ ಮನೋಭಾವ

ಅವರು ಇತರರಿಗಾಗಿ ಹೊಂದಿದ್ದ ಮನೋಭಾವದ ನಿಮಿತ್ತ, ಸಂಧಿಸಿದವರೆಲ್ಲರಿಗೂ, ಆದಿ ಕ್ರೈಸ್ತರು ಸುವಾರ್ತೆಯನ್ನು ಸ್ವಭಾವಿಕವಾಗಿ ಸಾರಿದರು (ಮತ್ತಾಯ 28:18-20;[4] ಅಪೊಸ್ತಲರ

ಕೃತ್ಯಗಳು 8:1, 4). ಆದಿ ಸಭೆಯ ವೃದ್ಧಿಗೆ, ಸಹಕರಿಸಿದ ಈ ಪ್ರಾಥಮಿಕ ಸಂಗತಿಯನ್ನು ಫಿಲಿಪ್ ಸ್ಕಾಫ್ ತಿಳಿಸಿರುವರು:

> ಸಂಸ್ಥಾಪನೆಗೊಂಡ ಕ್ರೈಸ್ತ ಸಭೆಯು ತನಗೆ ತಾನೇ ಮಿಷನರಿಯಾಗಿತ್ತು. ಅದು ತನ್ನಲ್ಲಿ ತಾನೇ ಸ್ವಾಭಾವಿಕವಾಗಿ ವೃದ್ಧಿಗೊಂಡಿತು, ತನ್ನ ಇರುವಿಕೆಯಿಂದಲೇ ಜನರನ್ನು ಆಕರ್ಷಿಸಿತು ... ಸಭೆಯ [ಪ್ರತಿ] ಎಲ್ಲಾ ಸದಸ್ಯರು ಮಿಷನರಿಗಳಾಗಿದ್ದರು, ಕ್ರಿಸ್ತನ ಪ್ರೀತಿಯಿಂದ ತಮ್ಮ ಸಂಗಡಿಗರನ್ನು ಪರಿವರ್ತನೆ ಮಾಡಿದರು - ಸೆಲ್ಸಸ್ ಸ್ಯಾಫಿಂಗ್ ತಿಳಿಸಿದ ಹಾಗೆ ಕೂಲಿಯವರು ಮತ್ತು ಕೆಲಸಗಾರರು, ಉಣ್ಣೆ ಹಾಗೂ ಚರ್ಮಕಾರರು, ಅಲಕ್ಷ್ಯಕ್ಕೆ ಒಳಗಾದ ಜನರು, ಅವರು ಕ್ರೈಸ್ತತ್ವವನ್ನು ಬಲವಾಗಿ ಸಾಕ್ಷಿಕರಿಸಿದರು ... ಮಹಿಳೆಯರು ಹಾಗೂ ಗುಲಾಮರು ತಮ್ಮ ಗೃಹಗಳಲ್ಲಿ ಇದನ್ನು ಪ್ರಚುರಪಡಿಸಿದರು ... ಪ್ರತಿ ಕ್ರೈಸ್ತರು ತನ್ನ ನೆರೆಯವನಿಗೆ ತಿಳಿಸಿದರು, ಕೂಲಿಕಾರನು ತನ್ನ ಜೊತೆ ಕೂಲಿಕಾರನಿಗೆ, ಗುಲಾಮನು ತನ್ನ ಜೊತೆ ಗುಲಾಮನಿಗೆ, ಸೇವಕರು ತಮ್ಮ ಯಜಮಾನ ಯಜಮಾನಿಯರಿಗೆ, ತನ್ನ ಪರಿವರ್ತನೆಯ ಕಥೆಯನ್ನು ಹೇಳಿದರು, ಹಡಗಿನ ಅಪಘಾತದಿಂದ ತಪ್ಪಿಸಿಕೊಂಡ ನಾವಿಕನು ತನ್ನ ಕಥೆಯನ್ನು ಹೇಳಿದಂತೆ ಹೇಳಿದರು.[5]

ಹಿರೀ ಸಭೆಯವರು ಅಪೊಸ್ತಲರ ಕುರಿತಾಗಿ, ಇವರು ಯೆರೂಸಲೇಮನ್ನು ತಮ್ಮ ಉಪದೇಶದಿಂದ ತುಂಬಿಸಿದಿರಿ ಎಂದು ಹೇಳಿದರು (ಅಪೊಸ್ತಲರ ಕೃತ್ಯಗಳು 5:28). *ನಾವು* ನಮ್ಮ ಪ್ರಪಂಚವನ್ನು, ರಾಷ್ಟ್ರವನ್ನು, ಜಿಲ್ಲೆಯನ್ನು, ನೆರೆಯ ಸ್ಥಳವನ್ನು ಸುವಾರ್ತೆಯಿಂದ ತಂಬಿಸಿದ್ದೇವೋ?

## ಪ್ರಾರ್ಥನೆಯ ಕಡೆಗಿರುವ ಮನೋಭಾವ

ಈ ವಿಷಯದ ಹೊರತಾಗಿ, ಕ್ರೈಸ್ತರ ಕುರಿತ ಆದಿ ಸಭೆಯವರ ಮನೋಭವವು ಜೀವಿತದ, ಕಡೆಗಿನ ಬೋಧನೆಯ ಕಡೆಗಿನ ಮನೋಭಾವವು ಏನೂ ಇಲ್ಲದಂತಾಗುತ್ತದೆ. ಅವರು ದೇವರ ಮೇಲಿನ ಅವಲಂಭನೆಯನ್ನು ಗ್ರಹಿಸಿದರು (4:24, 29). ನಾವು ಪ್ರಾರ್ಥನೆಯ ಜನರೆಂದು ಕರೆಯಲ್ಪಟ್ಟಿದ್ದೇವೋ? ಇಲ್ಲದಿದ್ದರೆ, ಮಾನಸಾಂತರಪಡಲು, ದೇವರು ಸಹಾಯಿಸಲಿ - ಆತನನ್ನೇ ಅವಲಂಭಿಸೋಣ!

## ಮುಕ್ತಾಯ

ಕೊನೆಯ ಒಂದು ವಿರೋಧವನ್ನು ನಾನು ಕೇಳುತ್ತೇನೆ: "ಅವರು ಯಶಸ್ವಿಯಾಗುವದಕ್ಕೆ ಆ ದಿನಗಳಲ್ಲಿ ಮಾತ್ರ ಅವರಿಗೆ ಸಾಧ್ಯವಿತ್ತು" ಎಂಬುದು ಸತ್ಯವೇ? *ಲೆಟರ್ ಟು ದಿ ಯಂಗ್ ಚರ್ಚಸ್* ಪುಸ್ತಕದಲ್ಲಿರುವ, J. B. ಫಿಲಿಪ್ಸ್‌ರವರ ಮಾತುಗಳನ್ನು ನೋಡಿರಿ:

> ಇತಿಹಾಸದ ವಿವರಗಳನ್ನು ಅರಿಯುವದಕ್ಕಿಂತಲೂ, ಇವುಗಳು ಬರೆಯಲ್ಪಟ್ಟವು ಎಂದು ನಾವು ನೆನಪು ಮಾಡುವ ಅಗತ್ಯವಿದೆ, ಅವರು ನಡೆಸಿದ ಜೀವಿತಕ್ಕೆ ಅನ್ಯರ ಹಿನ್ನೆಲೆಯಿತ್ತು. ಅಲ್ಲಿ ಸಭೆಗಳಿಲ್ಲ, ಭಾನುವಾರಗಳಿರಲಿಲ್ಲ, ನಂಬಿಕೆಯ ಕುರಿತ ಪುಸ್ತಕಗಳಿರಲಿಲ್ಲ, ಗುಲಾಮಗಿರಿ, ಲೈಂಗೀಕತೆ, ಅನೈತಿಕ ಕ್ರೂರತ್ವ, ಮಾನವನ ಅಸ್ವಸ್ಥತೆಗೆ ವಿರುದ್ಧ ಕಾರಣ ಮತ್ತು ಸಾರ್ವಜನಿಕವಾದ ಹೀನ ಅಭಿಪ್ರಾಯದ, ಕುರಿತ ಪುಸ್ತಕಗಳಿರಲಿಲ್ಲ, ಮಾತಿನ ಸಂಪರ್ಕವು ಇರಲಿಲ್ಲ. ಪ್ರಯಾಣವು ಕಷ್ಟಕರವಾಗಿತ್ತು, ಅನೇಕರು ಅವಿದ್ಯಾವಂತರಾಗಿದ್ದರು. "ನಮ್ಮ ಕಾಲದಲ್ಲಿನ ಕಷ್ಟಕರವಾದ ಸಮಯದ" ಕುರಿತು ಅನೇಕ ಕ್ರೈಸ್ತರು ಮಾತನಾಡುತ್ತಾರೆ. ಆದರೆ ಅವರಲ್ಲಿ ನಂಬಿಕೆಯ ಬೇರು ಉಂಟಾಗಿ, ವೃದ್ಧಿಗೊಂಡಿದ್ದು ಆಶ್ಚರ್ಯವೇ, ಮರಣವು ವೇಗವಾಗಿ ಉಂಟಾಗುವ ಸಮಯದಲ್ಲಿ ಅದು ಉಂಟಾಯಿತು. ಆದಿ ಕ್ರೈಸ್ತರು, ಕ್ರಿಸ್ತನ ಮೂಲಕ ನಿಜವಾದ

ದೇವರ ಮಕ್ಕಳಾಗಿದ್ದರು ಎಂದು ತಿಳಿದು ಬೆಂಕಿಯ ಪರಿವರ್ತನೆಯನ್ನು ಹೊಂದಿದ್ದರು. ಅವರು ಹೊಸ ಮಾನವರ ಸೃಷ್ಟಿ ಕಾರ್ಯವನ್ನು ಮಾಡುವವರಾಗಿದ್ದರು, ಹೊಸರಾಜ್ಯದ ಸಂಸ್ಥಾಪಕರಾಗಿದ್ದರು. ಶತಮಾನಗಳು ಕಳೆದು ಹೋಗಿದ್ದಾಗ್ಯೂ, ಅವರು ಇನ್ನು ಮಾತನಾಡುತ್ತಾರೆ, ಅವರು ನಂಬಿದ್ದನ್ನು ನಾವು ಒಂದು ವೇಳೆ ನಂಬಿದರೆ, ಅವರು ಸಾಧಿಸಿದ್ದನು ನಾವುಗಳು ಸಾಧಿಸಲು ಸಾಧ್ಯವಿದೆ.[6]

ನಮ್ಮೆಲ್ಲರಿಗೂ ಮನೋಭಾವದ ಕೊರತೆಯಿದೆ, ಮಿಲಿಯಾಂತರ ಜನರು ನರಕದ ಹಾದಿಯಲ್ಲಿದ್ದಾರೆ, ಅವರ ಬಗ್ಗೆ ಚಿಂತಕರಿಲ್ಲ. ಒಂದು ಸಾರಿ ಯೇಸುವನ್ನು ಅಂಗೀಕರಿಸಿದವರು, ಪ್ರಪಂಚಕ್ಕೆ ಆಕರ್ಷಿತರಾಗಿದ್ದಾರೆ, ಯಾರೂ ಚಿಂತಕರಲ್ಲ. *ಚಿಂತನೆ ಮಾಡುವಂತೆ ದೇವರು ನಮಗೆ ಸಹಾಯಿಸಲಿ!*

---

ಟಿಪ್ಪಣಿಗಳು

[1]ಯಥಾರ್ಥ ಹೃದಯಗಳ 17:6 ಟಿಪ್ಪಣಿ ನೋಡಿರಿ. [2]ಡಾನ್ ವಿಲ್ಲಿಂಗ್ ಹಾಮ್‌ರವರ ನನ್ನ ವಿವರಣೆ. [3]ಅಪೊಸ್ತಲರ ಕೃತ್ಯಗಳು 5:13, 14 ಆದಿ ಸಭೆಯಲ್ಲಿನ ಬಲವಾದ ಶಿಸ್ತಿನಿಂದ ಉಂಟಾದ ಪರಿಣಾಮವನ್ನು ತಿಳಿಸುತ್ತದೆ. [4]ಮಹಾ ಅಪ್ಪಣೆಯನ್ನು "ಎಲ್ಲಾ" ನಾಲ್ಕು ಬಾರಿ ಹೇಳಲಾಗಿದೆ ಎಲ್ಲಾ ಅಧಿಕಾರ, ಎಲ್ಲಾ ದೇಶ, ಯೇಸು ಬೋಧಿಸುವದೆಲ್ಲಾ ಮತ್ತು ಯಾವಾಗಲೂ. [5]Philip Schaff, *History of the Christian Church,* vol. 2, *Ante-Nicene Christianty A.D. 100-325* (New York: Charles Scribner's Sons, 1910; repr., Grand Rapids, Mich.: Wm. B. Eerdmans Publishing Co., 1973), 20-21. [6]J. B. Phillips, *Letters to Young Churches* (New York: Macmillan Co., 1958), xiii.